
# 31-07-2026

# INTERNATIONAL SEMINAR



## ಭಾರತದ ಶಿಕ್ಷಣದ ವ್ಯವಸ್ಥೆ ಪ್ರಪಂಚದಲ್ಲಿಯೇ ಅತ್ಯತ್ತಮ ಶಿಕ್ಷಣ ವ್ಯವಸ್ಥೆ

ನಾವಿಂದು ಕೃತಕ ಬುದ್ಧಿಮತ್ತೆಯ ಕಾಲದಲ್ಲಿ ಬದುಕುತ್ತಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲೂ ಕೃತಿಕ ಬುದ್ಧಿಮತ್ತೆಯದ್ದೇ ಕಾರುಬಾರು. ಕೃಷಿ, ವೈದ್ಯಕೀಯ ರಂಗ, ಶಿಕ್ಷಣವನ್ನೂ ಸೇರಿದಂತೆ ಆಧುನಿಕ ಸಮಾಜವನ್ನು ಕೃತಿಕ ಬುದ್ಧಿಮತ್ತೆಯು ಆವರಿಸಿಕೊಂಡಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕ ಡಾ.ಬಸವಣ್ಣ.ಎಂ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಕೇಂದ್ರ, ಎಂ.ಸಿ.ಎ ವಿಭಾಗದ ವತಿಯಿಂದ ಇಂದು “ಅಡಚಿಖಿಣಾಜಚಿ ಗಿಣಟಿ ಜಿಣಾ ಖಿಚ್ಞಾ ಆಜಾಚಿಟಿಣಾಟಿ ಚಿಟಿಜ ಈಣಾಜಚಿಖಿ ಊಚಿಟಿಜತಿಡಿಾಟಿಂ ಂಟಿಚಿಟಿಥಿ” ಎಂಬ ವಿಷಯದ ಕುರಿತು ಆಯೋಜಿಸಿದ್ದ ಒಂದು ದಿನದ ಅಂತರರಾಷ್ಟ್ರೀಯ ವಿಚಾರ ಗೋಷ್ಟಿಯನ್ನು ಉದ್ಘಾಟಿಸಿ ದಿಕ್ಸೂಚಿ ಭಾಷಣವನ್ನು ಮಾಡುತ್ತಾ ಅವರು ಮಾತನಾಡುತ್ತಿದ್ದರು. ಕೃತಕ ಬುದ್ಧಿಮತ್ತೆ ಮನುಷ್ಯರನ್ನು ಬದಲಿಸಲು ಸಾಧ್ಯವಿಲ್ಲ ಆದರೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ. ಭವಿಷ್ಯದ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳು ಕೌಶಲ್ಯವಂತರಾಗಲು ಕೃತಕ ಬುದ್ಧಿಮತ್ತೆ ಸಹಕಾರಿಯಾಗಿದೆ. ನಿರಂತರ ಕಲಿಕೆ ಎನ್ನುವುದು ಕೇವಲ ಪಠ್ಯದಿಂದ ಮಾತ್ರವಲ್ಲ, ಆಧುನಿಕ ಸಾಧನಗಳನ್ನು ಬಳಸಿಕೊಂಡು ಹಲವು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಬದುಕಿಗೆ ಅಳವಡಿಸಿಕೊಂಡಾಗ ಬದುಕು ಸುಂದರವಾಗುತ್ತದೆ. ಭಾರತವು ಇಂದು ಪ್ರಪಂಚದಲ್ಲೇ ಕೃತಕ ಬುದ್ಧಿಮತ್ತೆಯ ನಾಯಕನಾಗುತ್ತಿದ್ದು, ನೈಜ ಪ್ರಪಂಚದ ಸಮಸ್ಯೆಗಳಿಗೆ ಪರಿಹಾರಗಳನ್ನು ಆವಿಷ್ಕರಿಸಬೇಕಾಗಿದೆ. ಈ ದಿಸೆಯಲ್ಲಿ ಇಂತಹ ವಿಚಾರಗೋಷ್ಟಿಗಳು ಹೆಚ್ಚು ಹೆಚ್ಚು ಆಯೋಜಿಸಿ ಎಲ್ಲರಿಗೂ ಸದುಪಯೋಗವಾಗುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳು ಹಾಗೂ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಇಂಗ್ಲೆಂಡಿನ ಸಾಲ್ಫರ್ಡ್ ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಎನ್ವಿರಾನ್‌ಮೆಂಟ್‌ನ ಕಂಪ್ಯೂಟರ್ ಸೈನ್ಸ್‌ನ ಪ್ರಾಧ್ಯಾಪಕ ಡಾ.ಶಿವಕುಮಾರ್ ಪಾಲಯ್ಯನಕೋಟೆ ಮಾತನಾಡುತ್ತಾ ಭಾರತದ ಶಿಕ್ಷಣದ ವ್ಯವಸ್ಥೆ ಪ್ರಪಂಚದಲ್ಲಿಯೇ ಅತ್ಯತ್ತಮ ಶಿಕ್ಷಣ ವ್ಯವಸ್ಥೆಯಾಗಿದ್ದು, ಜಗತ್ತಿಗೆ ಮಾದರಿಯಾಗಿದೆ. ವಿದೇಶಗಳ ಕಾಲೇಜುಗಳಲ್ಲಿ ಎಲ್ಲಾ ಅತ್ಯಾಧುನಿಕ ಸೌಲಭ್ಯಗಳನ್ನು ನೀಡಿದರೂ ಸಹ ವಿದ್ಯಾರ್ಥಿಗಳು ತರಗತಿಗೆ ಹಾಜರಾಗುವುದಿಲ್ಲ, ಹಾಜರಾಗುವ ಕೆಲವೇ ವಿದ್ಯಾರ್ಥಿಗಳು ಉಪನ್ಯಾಸಕರಿಗೆ ಗೌರವವನ್ನು ನೀಡುವುದಿಲ್ಲ. ಕಾರ್ಯಗಾರವೆಂದರೇ ಅಭ್ಯಾಸ ಮಾಡುವ ಪ್ರಯೋಗಾಲಯವಿದ್ದಂತೆ. ಕೃತಕ ಬುದ್ಧಿಮತ್ತೆಯು ಜಗತ್ತಿನ ಎಲ್ಲಾ ಕಡೆಯು ತನ್ನ ಪ್ರಭಾವವನ್ನು ಬೀರುತ್ತಿರುವ ಕಾರಣದಿಂದಾಗಿ ಇಂದು ಎಲ್ಲೆಡೆಯೂ ಅದರ ಬಗ್ಗೆಯೇ ಚರ್ಚಿಸಲಾಗುತ್ತಿದೆ. ಆದರೆ, ನೈಜವಾದ ಸಮಸ್ಯೆಯೇನೆಂದರೆ ಕೃತಕ ಬುದ್ಧಿಮತ್ತೆ ಮಾನವನ ಬುದ್ಧಿಶಕ್ತಿಯನ್ನು ಮೀರಿಸುತ್ತದೆಯೇ ಎಂಬುದೇ ಆಗಿದೆ. ನಿಯೋಜಿತ ಕಾರ್ಯವೊಂದನ್ನು ವಿದ್ಯಾರ್ಥಿಗಳಿಗೆ ನೀಡಿದಾಗ ಅದನ್ನು ವಿದ್ಯಾರ್ಥಿಗಳೇ ಪೂರೈಸಿದ್ದಾರೋ ಅಥವಾ ಕೃತಕ ಬುದ್ಧಿಮತ್ತೆಯ ಸಹಾಯದಿಂದ ರಚಿಸಿದ್ದಾರೋ ಎಂಬುದನ್ನು ಕಂಡುಹಿಡಿಯುವುದು ಕಷ್ಟವಾಗುತ್ತಿದೆ ಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲರ ಡಾ.ಎಸ್.ಮರೀಗೌಡ ಮಾತನಾಡುತ್ತಾ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಶೈಕ್ಷಣಿಕ ಪಠ್ಯವನ್ನು ಮಾತ್ರವಲ್ಲದೇ ಅದರಾಚೆಗೂ ಕೌಶಲ್ಯಗಳನ್ನು ಕಲಿಸಲು ಇಂತಹ ವಿಚಾರ ಗೋಷ್ಟಿಗಳು ಅವಶ್ಯಕವಾಗಿದೆ. ಕೃತಕ ಬುದ್ಧಿಮತ್ತೆಯ ಬಗ್ಗೆ ವಿಶೇಷವಾದ ಕೊಡುಗೆಯನ್ನು ನೀಡಿರುವ ಹಲವು ವಿಜ್ಞಾನಿಗಳಿದ್ದು, ಅವರಲ್ಲಿ ಇಂದಿನ ಮುಖ್ಯ ಅತಿಥಿಗಳಾದ ಇಂಗ್ಲೆಂಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರಿನ ಡಾ.ಶಿವಕುಮಾರ್ ಪಾಲಯ್ಯನಕೋಟೆ ಕೂಡ ಒಬ್ಬರು. ಅವರು ಇಂದು ಇಲ್ಲಿ ಮಂಡಿಸುವ ವಿಚಾರ ಧಾರೆಗಳನ್ನು ನೀವು ಸರಿಯಾಗಿ ಅರ್ಥೈಸಿಕೊಂಡು ಬದುಕು ರೂಪಿಸಿಕೊಳ್ಳಿ ಎಂದು ಶುಭ ಹಾರೈಸಿದರು.

ವಿಚಾರ ಗೋಷ್ಟಿಯ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌ||ಕಾರ್ಯದರ್ಶಿ ಇಂಜಿನಿಯರ್ ಪಿ.ವಿಶ್ವನಾಥ್ ಮಾತನಾಡುತ್ತಾ ಇಂದಿನ ವಿಚಾರ ಗೋಷ್ಟಿಗೆ ಆಯ್ದುಕೊಂಡಿರುವ ವಿಚಾರವು ಅತ್ಯುತ್ತಮವಾದ ವಿಷಯವಾಗಿದೆ. ವಿಧಿ–ವಿಜ್ಞಾನ ಕೈಬರಹ ಪರೀಕ್ಷೆಯ ಮೂಲಕ ಸಮಾಜದಲ್ಲಿ ನಡೆಯುತ್ತಿರುವ ಹಲವಾರು ವಂಚನೆಗಳನ್ನು ತಡೆಗಟ್ಟಬಹುದಾಗಿದೆ. ಆದುದರಿಂದ ಸಂಪನ್ಮೂಲ ವ್ಯಕ್ತಿಗಳು ನೀಡುವ ಮಾಹಿತಿಗಳಿಂದ ಸರಿಯಾದ ಜ್ಞಾನವನ್ನು ಪಡೆಯುವಂತೆ ಸಲಹೆ ನೀಡಿದರು.. ಕು.ಧಾತ್ರಿ ಹಾಗೂ ಕು.ಹರಿಪ್ರಿಯ ಪ್ರಾರ್ಥಿಸಿದ ಕಾರ್ಯಕ್ರಮವನ್ನು ಎಂ.ಸಿ.ಎ ವಿಭಾಗ ಮುಖ್ಯಸ್ಥೆ ಡಾ.ಶೋಭಾ.ಡಿ ಸ್ವಾಗತಿಸಿದರು. ಸಂಸ್ಥೆಯ ಗೌ||ಕೋಶಾಧ್ಯಕ್ಷ ಶ್ರೀ.ಶ್ರೀಶೈಲರಾಮಣ್ಣವರ್, ವಿವಿಧ ಕಾಲೇಜುಗಳ ಸಂಶೋಧಕರು, ಅಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಕು.ಸಿಂಧು.ಆರ್ ನಿರೂಪಿಸಿ, ಎಂ.ಕಾಂ ವಿಭಾಗ ಮುಖ್ಯಸ್ಥೆ ಡಾ.ಎಸ್.ಪೂರ್ಣಿಮ ವಂದಿಸಿದರು.

## “ *AI won’t replace humans, it will create opportunities* “ Globally renowned Experts at VVGC

Inauguration of International Seminar on “Computer Vision For Text Detection and Forensic Handwriting Analysis” was held today at Auditorium Vidyavardhaka First Grade College, Sheshadri Iyer Road, Mysuru organized by MCA department, PG Centre of the college. The Siminar was also streamed online through Youtube.

The Programme was inaugurated by Dr.Basavanna M, Professor and Chairman, DoS in Computer Applications (MCA) Davanagere University, Shivagangotri, Davanagere, Karnataka. Addressing the audience he stated that the seminar aims to lay a foundation of values to build a creative future. Addressing the popular debate, “Will AI take our jobs?” Dr.Basavanna affirmed “AI is not replacing human jobs rather it is transforming them and creating new opportunities. The future belongs to those who continuously update themselves and explore the emerging real world problems. He emphasized that India is rapidly emerging as a global leader in AI world and technological growth. Adding that AI is instrumental across health care, cyber security, transport, infrastructure etc., he said that technology must ultimately serve to improve human life and uphold ethics..

Dr.Shivakumara Palaiahnakote, Professor in Computer Science, School of Science and Engineering Environment, University of Salford, Manchester, M54WT, UK was the Chief Resource person. He reflected on his global career and India’s distinct educational edge. He noted that true knowledge goes beyond using AI tools like GPTs, raising a critical technical question “Is there a tool or technology to conclusively identify AI generated content ?” he remarked that while we cannot stop AI, we must learn where to draw the line. He emphasized the unique strength of the Indian education system, cautioning that while tools like GPTs can provide information they can never replace real world experience or the traditional Guru Shishya bond.

Initially, Dr.S.MariGowda, Principal of the college, in his introductory remarks highlighted that despite the MCA department being in its infancy – established just eight months ago – has continuously organized high impact training programmes. He noted that swift preparations were made to host this seminar. The programme was thoughtfully designed to bridge the gap between industry and academia bringing in a resource person who is globally recognized among the top 2% of scientists, to provide the delegates with an extraordinary learning opportunity. Sri P. Vishwanath, Hon'ble Secretary, Vidyavardhaka Sangha, Mysuru presided over the programme who noted that with online fraud occurring almost 11 seconds globally, detection has become an enormous challenge. He commended the organizers for choosing a timely , essential subject and wished the Seminar a grand success.

The event was also graced by the guest of honour Sri Shrishaila Ramannavar, Hon'ble Treasurer VV Sangha ..

The programme started with an invocation by Ms. Dhathri and Ms. Haripriya. Dr.Shobha D, Associate Professor and Head, Dept. of Computer Applications welcomed the gathering and introduced the Chief guests, Ms.Sindhu R, Asst. Professor of MCA Department compered the programme. Dr.S.Poornima, Associate Professor and Head, PG Centre rendered vote of thanks. All the faculties of the college and of sisterly institutions, non-teaching staff and delegates, media participants and students were present.


VIDYAVARDHAKA FIRST GRADE COLLEGE
PG Centre, Department of Studies in Computer Applications,
Vidyavardhaka Research Foundation & IQAC
WELCOMES YOU TO
INTERNATIONAL SEMINAR
"COMPUTER VISION FOR TEXT DETECTION AND FORENSIC HANDWRITING ANALYSIS"
Date: 31.07.2026
Time 10.00 am


VIDYAVARDHAKA FIRST GRADE COLLEGE
PG Centre, Department of Studies in Computer Applications,
Date: 31.07.2026
Time 10.00 am


AKA FIRST GRADE COLLEGE
ATIONAL SEMINAR
Venue:
Sri P.M. Chikkaboraiah Hall


VIDYAVARDHAKA FIRST GRADE COLLEGE
INTERNATIONAL
Date: 31.07.2026
Time 10.00 am














Vidyavardhaka Sangha (R), Mysuru
VIDYAVARDHAKA FIRST GRADE COLLEGE
PG Centre, Department of Studies in Computer Applications,
Vidyavardhaka Research Foundation & IQAC
WELCOMES YOU TO
INTERNATIONAL SEMINAR
HANDWRITING ANALYSIS"
Date: 31.07.2026
Time 10.00 am
Venue:


VIDYAVARDHAKA FIRST GRADE COLLEGE




Vidyavardhaka Sangha (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru - 570001
WELCOMES YOU TO
Chief Guest
Dr.Basavanna M


VIDYAVARDHAKA FIRST GRADE COLLEGE
WELCOMES YOU TO
INTERNATIONAL SEMINAR
Date: 31.07.2026
Time 10.00 am


SEMINAR
Venue:




1. Text Detection in Video Images






ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
VIDYAVARDHAKA FIRST GRADE COLLEGE
BLOCK -A


VIDYAVARDHAKA SANGHA (R) MYSURU
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
VIDYAVARDHAKA FIRST GRADE COLLEGE
BLOCK -A


VIDYAVARDHAKA SANGHA (R) MYSURU
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
VIDYAVARDHAKA FIRST GRADE COLLEGE
BLOCK -A